ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 3, July-August 2025, Pp. 98-101
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಮೂಲಭೂತ ಸಮಸ್ಯೆಗಳ ನಿವಾರಣೆಯತ್ತ ನೈಜ ದುರ್ಬಲ ಬುಡಕಟ್ಟು ಕೊರಗ ಜನಾಂಗ

**ಡಾ. ಸಬಿತಾ ಕೊರಗ**
ಸಹಾಯಕ ಪ್ರಾಧ್ಯಾಪಕರು, ಸಮಾಜ ಶಾಸ್ತ್ರ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ, ಮಂಗಳೂರು

***Abstract:***

*ಭಾರತದಲ್ಲಿ 75 ಬುಡಕಟ್ಟು ಸಮುದಾಯಗಳನ್ನು ನೈಜ ದುರ್ಬಲ ಬುಡಕಟ್ಟು ಗುಂಪಿಗೆ ಸೇರಿಸಲಾಗಿದೆ. ಇವರು ದೇಶದ ವಿವಿಧ ರಾಜ್ಯಗಳಲ್ಲಿ ವಾಸವಾಗಿದ್ದಾರೆ. ಅದರಂತೆ ಕರ್ನಾಟಕದಲ್ಲಿಯೂ ಕೂಡ ಕೊರಗ ಮತ್ತು ಜೇನುಕುರುಬ ಸಮುದಾಯಗಳು ನೈಜ ದುರ್ಬಲ ಬುಡಕಟ್ಟು ಗುಂಪುಗಳಿಗೆ ಸೇರಿವೆ. ಕರ್ನಾಟಕ ರಾಜ್ಯದ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊರಗರು ಮತ್ತು ಜೇನು ಕುರುಬರು ಮೈಸೂರು ಪ್ರಾಂತ್ಯದಲ್ಲಿ ವಾಸವಾಗಿದ್ದಾರೆ. ಕೊರಗರು ಸುಮಾರು 15,000 ಜನಸಂಖ್ಯೆಯನ್ನು ಹೊಂದಿದ್ದು ಮೂವತ್ತು ಸಾವಿರ ವರ್ಷದ ಹಿಂದಿನ ಪರಂಪರೆಯನ್ನು ಹೊಂದಿದ್ದಾರೆ. ಕೊರಗ ಬುಡಕಟ್ಟಿನ ಇತಿಹಾಸವು ಮುಖ್ಯ ಭೂಮಿಕೆಯಲ್ಲಿ ಎಲ್ಲಿಯೂ ಕಾಣಿಸಿಕೊಳ್ಳದೆ ಅಂಚೀಕರಣಗೊಂಡಿದ್ದೆ ಹೆಚ್ಚು. ಜಾತಿಸಂಕರ ಹುಟ್ಟಿನ ಕಟ್ಟು ಕಥೆಗಳಲ್ಲಿ ಕೊರಗರು ಸಮಾಜದ ಏಣಿ ಶ್ರೇಣಿಯಲ್ಲಿ ಕೊನೆಯ ಚಾಂಡಾಲರಾಗಿರುವ ಕಥೆಗಳು ಇರಬಹುದು ಅಥವಾ ಕೊರಗರ ರಾಜ ಹುಭಾಸಿಕ ಕಥೆಯಲ್ಲಿ ನಿರ್ವಸತಿಗೊಳಿಸಿ ಮುಖ್ಯ ಭೂಮಿಕೆಯಿಂದ ಓಡಿಸಿದ ಈ ಎಲ್ಲಾ ಕಥೆಗಳು ಕೊರಗರ ಇರುವಿಕೆಯನ್ನು, ಅಸ್ಮಿತೆಯನ್ನೇ ಇಲ್ಲವಾಗಿಸಿದೆ. ಕೊರಗರ ಪೂರ್ವಿಕರಾದ ಕೊರಗ ತನಿಯಜ್ಜನ ಅತಿಮಾನುಷ ಶಕ್ತಿಯೂ ಭೌಗೋಳಿಕವಾಗಿ ಎಲ್ಲ ಕಡೆ ಆವರಿಸಿಕೊಂಡರು ವಾಸ್ತವದಲ್ಲಿ ದನಿ ಇಲ್ಲದ ಕೊರಗರು ಕುಬ್ಜರಾಗಿರುವ ಸಂಕಥನಗಳೇ ಸಿಗುತ್ತದೆ. ಪರಿಶುದ್ಧ ಎನಿಸುವ ಸಮಾಜಕ್ಕೆ ಕೊರಗರು ಹಗಲಿಗೆ ಅಸ್ಪೃಶ್ಯರಾಗಿಯೇ ಕಾಣುತ್ತಾರೆ. ಇಂತಹ ಅನಿಷ್ಟ ಪದ್ಧತಿಯಲ್ಲಿ ನಲುಗಿದ ಕೊರಗರು ಪ್ರಸ್ತುತ ತಮ್ಮ ಕುರುಹುಗಳೆ ಇಲ್ಲದಂತಹ ಜೀವನ ಸಾಗಿಸುತ್ತಾ ಋಣಾತ್ಮಕವಾಗಿ ನಶಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಕೊರಗ ಸಮುದಾಯದವರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಪ್ರಸ್ತುತ ಲೇಖನದಲ್ಲಿ ಚರ್ಚಿಸಲಾಗಿದೆ.*

***Keywords:*** *ಕರ್ನಾಟಕ, ಬುಡಕಟ್ಟು ಸಮುದಾಯ, ಪಿವಿಟಿಜಿ, ಕೊರಗ ಬುಡಕಟ್ಟು*

**ಪೀಠಿಕೆ**

ಕೊರಗರು ಈ ನೆಲದ ಮೂಲನಿವಾಸಿಗಳಾಗಿದ್ದರೂ ಕೂಡ ಈ ನೆಲದಲ್ಲಿ ತಮ್ಮ ಹಕ್ಕನ್ನು ಪಡೆಯಲು ಹೋರಾಟಕ್ಕೆ ಇಳಿಯ ಬೇಕಾದ ಪರಿಸ್ಥಿತಿಯಲ್ಲಿಯೇ ಬದುಕಬೇಕಾಗಿದೆ. ನಾವು ನಮ್ಮದು ಎನ್ನುವ ಮನಸ್ಥಿತಿಯನ್ನು ಹೊಂದಿರುವ ಕೊರಗರು ಈ ನೆಲದ ಹಕ್ಕನ್ನು ತನ್ನ ಖಾಸಗಿ ಎನ್ನುವ ಮನೋಭಾವನೆಯನ್ನು ಹೊಂದಿಲ್ಲ. ಇಂದಿಗೂ ಕೃಷಿ ಪೂರ್ವ ಜೀವನ ಕ್ರಮವನ್ನು ಹೊಂದಿರುವ ಕೊರಗರು ಭೂಮಿಯ ಹಕ್ಕಿಗಾಗಿ ಹೋರಾಟಕ್ಕಿಳಿದು ತಮ್ಮ ಮೂಲಭೂತ ಹಕ್ಕಿಗಾಗಿ ಧರಣಿ

***Please cite this article as:*** ಸಬಿತಾ ಕೊರಗ. (2025). ಮೂಲಭೂತ ಸಮಸ್ಯೆಗಳ ನಿವಾರಣೆಯತ್ತ ನೈಜ ದುರ್ಬಲ ಬುಡಕಟ್ಟು ಕೊರಗ ಜನಾಂಗ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 4(3), 98–101

ನಿರತರಾಗಿರುವುದು ಕಾಣಬಹುದು. 1990 ರಲ್ಲಿ ಡಾ. ಮಹ್ಮದ್ ಫೀರ್ ವರದಿ ಜಾರಿಯಾಗಿ ಕೇವಲ 500 ಎಕರೆ ಭೂಮಿಯನ್ನು ಪಡೆದ ಕೊರಗರು ಅದರ ಪುನರ್ವಸತಿಗಾಗಿ ಇಂದಿಗೂ ಭೂಮಿ ಹೋರಾಟದಲ್ಲಿ ತೊಡಗಿರುವುದು ಇವತ್ತಿನ ವಾಸ್ತವ.

1970 ರ ಕಾಲಘಟ್ಟದಲ್ಲಿ ಸಮಾಜದ ಒಂದಷ್ಟು ತಳಸ್ತರ ಸಮುದಾಯಗಳು ಹೋರಾಟಕ್ಕಿಳಿದು ತಮ್ಮ ಹಕ್ಕುಗಳ ಅರಿವನ್ನು ಪಡೆದವು. ಅದರಂತೆಯೇ ಕೊರಗ ಸಮುದಾಯವು ಸಮಗ್ರ ಗ್ರಾಮೀಣ ಆಶ್ರಮ ಕಾಪು ಎಂಬ ಸರಕಾರೇತರ ಸಂಸ್ಥೆ ಇದರ ಸಹಕಾರದೊಂದಿಗೆ ಸಂಘಟನೆಗೊಂಡು ಮೂಲಭೂತ ಹಕ್ಕುಗಳ ಪ್ರತಿಪಾದನೆಗಾಗಿ ಸ್ಥಳೀಯ ಆಡಳಿತದೊಂದಿಗೆ ಚಳುವಳಿ ಕೈಗೊಂಡು ಒಂದಷ್ಟು ಕುಟುಂಬಗಳು ಭೂಮಿಯ ಹಕ್ಕನ್ನು ಪಡೆದವು. ಆದರೆ ಕೊರಗರ ಮೂಲಭೂತ ಸಮಸ್ಯೆಗಳು ಅಮೂಲಾಗ್ರವಾಗಿ ರಚನಾತ್ಮಕ ಬದಲಾವಣೆಯಾಗದೆ ಇಂದಿನ ಆಧುನಿಕ ಕಾಲಘಟ್ಟದಲ್ಲಿಯೂ ಈ ಹಿಂದಿನಸಮಸ್ಯೆಗಳೇ ಮುಂದುವರಿಯುತ್ತಿರುವುದು ಕಾಣಬಹುದು.

1980 ರ ದಶಕದಲ್ಲಿ ಕೊರಗರು ಪ್ರಥಮ ಬಾರಿಗೆ ಸಾಮಾಜಿಕವಾಗಿ ಒಗ್ಗೂಡಿದರು. ಕಳೆದ 20 ವರ್ಷದ ಬದಲಾವಣೆಗಳನ್ನು ಪರಿಗಣಿಸಿದರೆ ಕೊರಗರಲ್ಲಿ ಬಹಳ ವೇಗದ ಬದಲಾವಣೆಗಳು ಕಾಣಸಿಗುತ್ತದೆ. ದನಿ ಇರದ ಅಸ್ಪೃಶ್ಯ ಅನಕ್ಷರಸ್ಥ ಕೊರಗರು ತಮ್ಮಲ್ಲಿ ಶೈಕ್ಷಣಿಕ ಜಾಗೃತಿಯನ್ನು ಬೆಳೆಸಿಕೊಂಡಿತು. ಇದರ ಪರಿಣಾಮ ಕೇವಲ 20 ವರ್ಷದಲ್ಲಿ ಸುಮಾರು 150 ಕ್ಕೂ ಹೆಚ್ಚು ಸ್ನಾತ್ತಕೋತ್ತರ ಪದವಿ ಮತ್ತು 10 ಕ್ಕೂ ಹೆಚ್ಚು ಜನರು ಡಾಕ್ಟರೇಟ್ ಪದವಿಯನ್ನು ಪಡೆಯುತ್ತಿರುವುದು ಕಾಣಬಹುದು. ಕೆಲವೇ ವರ್ಷಗಳಲ್ಲಿ ತಮ್ಮ ಸಮಾಜದ ದಿಕ್ಕನ್ನೇ ಬದಲಾಯಿಸಿ ಅರಿವಿನ ಹಾದಿಯಲ್ಲಿ ತನ್ನ ಕುರುಹನ್ನು ತಾನೇ ಹುಟ್ಟುಹಾಕುತ್ತಿರುವುದು ಕಾಣಬಹುದು. ಒಂದೋ– ಎರಡೋ ಗಂಟೆಯಲ್ಲಿ ಚಿತ್ರಿಸಿದ ಸಿನಿಕಥೆಗಳ ಮೌಲ್ಯಗಳಿಗೆ ಮಾರು ಹೋಗುವ ಸಮಾಜ ಇವತ್ತು ಎರಡು ದಶಕಗಳಲ್ಲಿ ತನ್ನ ಸಮುದಾಯದ ದಿಕ್ಕನ್ನೇ ಬದಲಾಯಿಸಿಕೊಂಡ ಈ ಹೋರಾಟದ ಮೌಲ್ಯವನ್ನು ಸಮಾಜ ಗ್ರಹಿಸದಿರುವುದು ದುರಂತ. ಅನಿಷ್ಟರು, ಅಸ್ಪೃಶ್ಯರು ಹೀಗೆ ಹೀನಾಯವಾಗಿ ಸಮಾಜದಲ್ಲಿ ಗುರುತಿಸಿಕೊಂಡ ಒಂದು ಬುಡಕಟ್ಟು ಸಮಾಜ ಸ್ವಾಭಿಮಾನದ ಬದುಕಿನತ್ತ ಹೆಜ್ಜೆಯನ್ನಿಡುತ್ತಿದೆ. ದಿನಗೂಲಿ ಮಾಡುವ ಮತ್ತು ಬುಟ್ಟಿ ನೇಯ್ಗೆ ವೃತ್ತಿಯಲ್ಲಿ ತೊಡಗಿಕೊಂಡ ಕೊರಗ ಸಮುದಾಯದ ಪೋಷಕರು ತಮ್ಮ ಮಕ್ಕಳನ್ನು ಕಷ್ಟಪಟ್ಟು ಪ್ರಾಥಮಿಕ, ಪದವಿ ಶಿಕ್ಷಣವನ್ನು ಕೊಡಿಸುತ್ತಿದ್ದಾರೆ. ಆದರೆ ಶಿಕ್ಷಣ ಪಡೆದ ಯುವಜನರು ತಮ್ಮ ಜೀವನಾಧಾರಕ್ಕಾಗಿ ಉದ್ಯೋಗವನ್ನು ಹುಡುಕಿ ಇತ್ತ ಸ್ಪರ್ಧಾತ್ಮಕ ಯುಗದಲ್ಲಿ ಸರಿಯಾದ ಉದ್ಯೋಗವು ದೊರೆಯದೆ ತಾವು ಶಿಕ್ಷಣ ಪಡೆಯುವುದು ವ್ಯರ್ಥ ಎನ್ನುವ ಧೋರಣೆಗೆ ಒಳಗಾಗಿದ್ದಾರೆ. ಅಷ್ಟೇ ಅಲ್ಲದೆ ಅತ್ಯಂತ ಉನ್ನತ ಶಿಕ್ಷಣವನ್ನು ಪಡೆದು ಕೊರಗ ಯುವಜನರು ತನ್ನ ಶೈಕ್ಷಣಿಕ ಅರ್ಹತೆಗೆ ಸರಿಯಾದ ಉದ್ಯೋಗ ದೊರೆಯದೆ ಬದುಕಿಗಾಗಿ ಸ್ವಚ್ಛತಾ ಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ. ಇನ್ನೂ ಮುಂದುವರಿದು ಕೊರಗ ಮಕ್ಕಳು ಆತ್ಮಹತ್ಯೆಗಳನ್ನು ಮಾಡಿಕೊಂಡ ಪ್ರಸಂಗಗಳು ಬೆಳಕಿಗೆ ಬಂದಿದೆ. ಇದೊಂದು ಪ್ರಸ್ತುತ ಸಮಾಜದ ದೊಡ್ಡ ಸವಾಲಾಗಿದೆ.

ಸುಮಾರು 40 ವರ್ಷದ ಹೋರಾಟದ ಬದುಕಿನಲ್ಲಿ ಕೊರಗರು ಸರಕಾರದಿಂದ ಯಾಚಿಸಿದ್ದು ಸ್ವಾಭಿಮಾನದ ಬದುಕು, ತಮ್ಮದೇ ಆದ ನೆಲ, ಸೂರು, ಶಿಕ್ಷಣ, ಆಹಾರದ ಭದ್ರತೆ ಮತ್ತು ಆರೋಗ್ಯದ ಬೇಡಿಕೆಗಳು. ಆದರೆ ಇದು ಯಾವುದು ಕೂಡ ಪೂರ್ಣ ಪ್ರಮಾಣದಲ್ಲಿ ಕೊರಗರಿಗೆ ಇಂದಿಗೂ ಲಭಿಸಲಿಲ್ಲ, ನೆಲದ ಹಕ್ಕೆ ಇಲ್ಲದ ಕೊರಗರು ಏನು ತಾನೇ ತನ್ನ ಶಿಕ್ಷಣ, ಆರೋಗ್ಯ, ಅಭಿವೃದ್ಧಿಯ ಬಗ್ಗೆ ಚಿಂತಿಸಿಯಾರು?

ಮಾನವಶಾಸ್ತ್ರಜ್ಞರಾದ ಡಾ. ಎಲ್ವಿನ್‌ರವರು ಬುಡಕಟ್ಟು ಅಭಿವೃದ್ಧಿಗಾಗಿ ತಮ್ಮ ಸಲಹೆಯನ್ನು ನೆಹರೂರವರಿಗೆ ನೀಡುವಾಗ ಬಲವಾಗಿ

ಒತ್ತುನೀಡಿರುವುದು ಬುಡಕಟ್ಟು ಸಮುದಾಯಗಳ ಸಂಸ್ಕೃತಿಗಳನ್ನು ಉಳಿಸಿಕೊಂಡು ಅಂದರೆ ಬುಡಕಟ್ಟು ಜನರು ಮತ್ತು ಸಂಸ್ಕೃತಿಯ ಸಂರಕ್ಷಣೆಯೊಂದಿಗೆ ಅಭಿವೃದ್ಧಿ ಕಾರ್ಯ ಕೈಗೊಳ್ಳಬೇಕೆಂದು ಆದರೆ ಇಂದಿಗೆ ಸ್ವಾತಂತ್ರ್ಯ ಬಂದು 75 ವರ್ಷ ಕಳೆದರು ಬುಡಕಟ್ಟು ಸಮುದಾಯಗಳು ಮುಖ್ಯ ಭೂಮಿಕೆಯಲ್ಲಿ ಕಾಣಿಸದೆ ಇರುವುದು ದುರಂತ. ಇತ್ತ ಸಂಸ್ಕೃತಿಯೂ ಇಲ್ಲದೇ ಇನ್ನೊಂದು ಕಡೆಯಲ್ಲಿ ಆಧುನಿಕತೆಗೂ ತೆರೆದುಕೊಳ್ಳಲು ಸಾಧ್ಯವಾಗದೆ ಕೊರಗರ ಬದುಕು ಭವಿಷ್ಯದ ಬಗ್ಗೆ ಯಾವುದೇ ಭರವಸೆಯನ್ನು ಉಳಿಸಿಕೊಂಡಿಲ್ಲ. ಅಲ್ಪ ಸ್ವಲ್ಪ ಶಿಕ್ಷಣ ಪಡೆದ ಕೊರಗ ಯುವಜನರು ಉದ್ಯೋಗವಿಲ್ಲದೆ ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಔದ್ಯೋಗಿಕವಾಗಿ ಅನ್ಯಾಯಕ್ಕೆ ಒಳಗಾಗಿದ್ದಾರೆ. ಮೂಲತಃ ಕೊರಗರು ಅರೆ ಅಲೆಮಾರಿ ಸಮುದಾಯವಾಗಿದ್ದು ಕೃಷಿ ಪೂರ್ವ ಜೀವನಕ್ರಮವನ್ನು ಹೊಂದಿದ್ದಾರೆ. ಅಜಲು–ಅಸ್ಪೃಶ್ಯತೆಯ ಕಾರಣದಿಂದ ತಾತ್ಕಾಲಿಕವಾಗಿ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಗಳಿಗೆ ವಲಸೆ ಹೋಗಿ ವಾರಗಟ್ಟಲೇ ಕೆಲವೊಂದು ಬಾರಿ ತಿಂಗಳುಗಟ್ಟಲೆ ಅಜಲು ಚಾಕರಿಗಳಲ್ಲಿ ನಿರತರಾಗುತ್ತಿದ್ದರು. ಈ ಕಾರಣದಿಂದ ಅವರು ಯಾವುದೇ ಆಸ್ತಿಯ ಹಕ್ಕು ಪತ್ರಗಳನ್ನು ಪಡೆದುಕೊಳ್ಳಲಿಲ್ಲ ಇದು ಅವರ ಜೀವನ ಶೈಲಿ, ಆಹಾರದ ಶೈಲಿಯ ಮೇಲೂ ಮತ್ತು ಅವರ ಮಕ್ಕಳ ಮೇಲೂ ಪರಿಣಾಮ ಬೀರಿದೆ. ಉದಾಹರಣೆಗೆ ಕೊರಗರು ಹಿಂದೆ ಅಜಲು ಅಸ್ಪೃಶ್ಯತೆಯ ಕಾರಣದಿಂದ ಕೊರಗೇತರರ ಮನೆಗಳಲ್ಲಿ ಅಳಿದುಳಿದ ಆಹಾರ ಪದಾರ್ಥಗಳನ್ನು ಸಂಗ್ರಹಿಸಿ ಸೇವಿಸುತ್ತಿದ್ದರು. ಮತ್ತು ಇದನ್ನೇ ವಾರಗಟ್ಟಲೇ ಸಂಗ್ರಹಿಸಿ ಇಟ್ಟುಕೊಳ್ಳುತ್ತಿದ್ದರು. ಇದರಿಂದ ಅವರ ಆರೋಗ್ಯದ ಮೇಲೆ ತೀವ್ರ ತರಹದ ಸಮಸ್ಯೆ ಉಂಟಾಗಿ ಕ್ಷಯ, ಅನೀಮಿಯ ಇನ್ನೂ ಅನೇಕ ಮಾರಣಾಂತಿಕ ಖಾಯಿಲೆಗಳಿಗೆ ತುತ್ತಾಗುತ್ತಿದ್ದರು. ಈ ಸಾಮಾಜಿಕ ಕಟ್ಟುಪಾಡಾದ ಅಜಲಿಗೆ ತುತ್ತಾಗಿ ತಮ್ಮ ಸಂತತಿಯೇ ನಾಶ ಮಾಡಿಕೊಂಡರು. ಇದರಿಂದ ಒಂದು ಪೀಳಿಗೆಯೆ ಮೂಲಭೂತ ಅವಶ್ಯಕತೆಗಳಿಂದ ವಂಚಿತವಾಗಿದೆ. ಪ್ರಸ್ತುತ ಅಜಲು ನಿಷೇಧ ಕಾಯ್ದೆಯು ಜಾರಿಯಾಗಿ ಸರಕಾರ ರಕ್ಷಣೆ ನೀಡುತ್ತದೆ ಎಂದು ಮೇಲ್ನೋಟಕ್ಕೆ ಅನ್ನಿಸಿದರು ಅನೌಪಚಾರಿಕವಾಗಿ ಸಮಾಜ ಮತ್ತು ಶಿಕ್ಷಿತ ಕೊರಗೇತರರು ಅಜಲು ಪದ್ಧತಿಯನ್ನು ಜೀವಂತವಿರಿಸಿದ್ದಾರೆ. ವೈಜ್ಞಾನಿಕವಾಗಿ ಚಂದ್ರನ ಮೇಲೆ ಕಾಲಿಡುವ ಯುಗದಲ್ಲಿರುವ ಸಮಾಜ ಅಮಾವಾಸ್ಯೆ ದಿನ ಕೊರಗರನ್ನು ಕರೆಸಿ ತನ್ನ ಶನಿ ಗ್ರಹಚಾರಗಳನ್ನು ವರ್ಗಾಯಿಸುವ ಪದ್ಧತಿಯನ್ನು ಉಳಿಸಿಕೊಂಡಿದೆ. ಈ ದ್ವಂದ್ವದಲ್ಲಿ ಕೊರಗ ಯುವಜನರು ಜೀವನದ ಭರವಸೆಯನ್ನು ಕಳೆದುಕೊಂಡಿದ್ದಾರೆ.

ಅಜಲು ನಿಷೇಧವಾಗದೆ ಕೊರಗರ ಅಭಿವೃದ್ಧಿ ಅಸಾಧ್ಯ ಯಾಕೆಂದರೆ ಕೊರಗರು ಈ ಅನಿಷ್ಟ ವರ್ತುಲದೊಳಗೆ ಸಿಲುಕಿ ಅರ್ಧ ಸರ್ವನಾಶವಾಗಿದ್ದಾರೆ ಇವತ್ತಿನ ತಂತ್ರಜ್ಞಾನ ಕಾಲಘಟ್ಟದವರೆಗೆ ಅಜಲು ಮುಂದುವರೆದಿದೆ ಎಂದರೆ ನಂಬಲು ಅಸಾಧ್ಯ. ಈ ಒಂದು ಅನಿಷ್ಟ ಪದ್ಧತಿ ಕೊರಗ ಸಮುದಾಯವನ್ನು ಮಾನಸಿಕವಾಗಿ ಎಷ್ಟು ಹಿಂಸಿಸಿದೆ ಎಂದರೆ ಮನಃಶಾಸ್ತ್ರದ ಪ್ರಕಾರ ಒಂದು ಮಾನಸಿಕ ಹಿಂಸೆಯು ಯುದ್ಧ ಹಿಂಸೆಯಷ್ಟೇ ಪ್ರಖರವಾಗಿದ್ದು, ಯುದ್ಧ ಹಿಂಸೆಗೆ ಒಳಗಾದಾಗ ಆಗಬೇಕಾದ ಚಿಕಿತ್ಸಾ ವಿಧಾನವನ್ನು ವಹಿಸಬೇಕಾಗಿದೆ ಕೊರಗರು ಶತಮಾನಗಳಿಂದ ಅಷ್ಟೊಂದು ಗಾಢ ಮಾನಸಿಕ ಹಿಂಸೆಗೆ ಒಳಗಾಗಿದ್ದಾರೆ. ಜೊತೆಗೆ ಈ ವರೆಗೆ ಅವರು ಅನುಭವಿಸಿದ ಬಡತನ, ಅವಮಾನಗಳಿಂದ ಹೊರಗೆ ಬರಲು ಕನಿಷ್ಠ ಏಳು ಪೀಳಿಗೆಯೆ ಬೇಕಾಗಬಹುದು ಎಂದು ಅಂದಾಜಿಸುತ್ತಾರೆ. ಆ ಹಿನ್ನೆಲೆಯಲ್ಲಿ ಇಂದು ಕೊರಗರು ಸುಮಾರು 20 ವರ್ಷದ ಅವಧಿಯಲ್ಲಿ ಅಂದರೆ 40 ವರ್ಷ ಸಂಘಟನೆಯ ಮತ್ತು ಸಮಗ್ರ

ಗ್ರಾಮೀಣ ಆಶ್ರಮದ ಸಂಯೋಜನೆಯೊಂದಿಗೆ ಸಮುದಾಯದ ಯುವಜನರು ಜಾಗೃತಿಗೆ ಒಳಗಾಗುತ್ತಿದ್ದಾರೆ. ಇದೊಂದು ಆಶಾದಾಯಕ ವಿಷಯವಾಗಿದ್ದಾಗಿಯೂ ಕೂಡ ಕೊರಗರು ಇಂತಹ ಮಾನಸಿಕ ಒತ್ತಡದ ಜೊತೆಗೆ ಆಧುನಿಕ ಜಗತ್ತಿನ ಸ್ಪರ್ಧೆಯನ್ನು ಎದುರಿಸಲು ಸಾಧ್ಯವಾಗದೆ ಮಾನಸಿಕ ಖಿನ್ನತೆಗೆ ಒಳಗಾಗುತ್ತಿರುವುದು ಕಾಣಬಹುದಾಗಿದೆ.

ಈ ಹಿನ್ನೆಲೆಯಲ್ಲಿ ಗಮನಿಸಿದರೆ ಕೊರಗರನ್ನು ಸಂರಕ್ಷಿಸುವ ಜೊತೆ–ಜೊತೆಗೆ ಅಭಿವೃದ್ಧಿಯನ್ನು ಅಂದರೆ ಆರ್ಥಿಕ, ಸಾಮಾಜಿಕ, ಬೌದ್ಧಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಯನ್ನು ಕೈಗೊಳ್ಳಬೇಕು. ಅವರ ಜೀವನಾಧಾರಕ್ಕೆ ಸುಸ್ಥಿರವಾದ ರಚನಾತ್ಮಕ ಕಾರ್ಯದೊಂದಿಗೆ ಉದಾಹರಣೆಗೆ ಕೇರಳ ಮಾದರಿ ಅರಲಂ ಬುಡಕಟ್ಟು ಪುನರ್ವಸತಿಯಂತೆ 5,000 ಎಕರೆ ಭೂಮಿಯನ್ನು ಕಾಯ್ದಿರಿಸಿ ಅವರ ಸಾಮಾಜಿಕ. ಆರ್ಥಿಕ, ಅಭಿವೃದ್ಧಿಯನ್ನು ಕೈಗೊಂಡು ನಶಿಸುತ್ತಿರುವ ಕೊರಗ ಸಮುದಾಯವನ್ನು ಸಂರಕ್ಷಿಸಬೇಕಾಗಿದೆ. ಶತಮಾನಗಳಿಂದ ಸಾಂವಿಧಾನಿಕವಾಗಿ ಹಕ್ಕುಗಳಿಂದ ವಂಚಿತವಾದ ಕೊರಗ ಸಮುದಾಯವನ್ನು ಈ ತರಹದ ರಚನಾತ್ಮಕ ಕಾರ್ಯ ಯೋಜನೆ ಮುಖಾಂತರ ಮುಂದಿನ 20 ವರ್ಷದ ಸುಸ್ಥಿರ ಅಭಿವೃದ್ಧಿಯ ದೃಷ್ಟಿಕೋನ ಇಟ್ಟುಕೊಂಡು ಕೈಗೊಂಡಲ್ಲಿ ಖಂಡಿತವಾಗಿಯೂ ಮುಖ್ಯ ಭೂಮಿಕೆಯಲ್ಲಿ ಸ್ಥಾನವನ್ನು ಪಡೆಯಲು ಸಾಧ್ಯ ಮತ್ತು ಸಾಮಾಜಿಕ ನ್ಯಾಯ ದೊರೆತಂತಾಗುತ್ತದೆ.

**ಪರಾಮರ್ಶನ ಗ್ರಂಥಗಳು**


- ಅಮೃತ ಸೋಮೇಶ್ವರ. (1982) *ಕೊರಗರು.* ಐಬಿಎಚ್ ಪ್ರಕಾಶನ
- ಅರವಿಂದ ಮಾಲಗತ್ತಿ ಮತ್ತು ಒಡೆಯರ್ ಡಿ ಹೆಗ್ಗಡೆ. (2007). *ಕೊರಗ ಜನಾಂಗ–ವಿಶ್ಲೇಷಣಾತ್ಮಕ ಅಧ್ಯಯನ.* ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತು.
- ಮೇತ್ರಿ ಕೆ.ಎಂ. (2017). *ಸೂಕ್ಷ್ಮ ಆದಿವಾಸಿಗಳು.* ಕರ್ನಾಟಕ ಆದಿವಾಸಿ ರಕ್ಷಣಾ ಪರಿಷತ್.
- ಪುರುಷೋತ್ತಮ ಬಿಳಿಮಲೆ. (1993). *ಕೊರಗರು: ಒಂದು ಪರಿಚಯಾತ್ಮಕ ಕೃತಿ.* ಕನ್ನಡ ಸಾಹಿತ್ಯ ಅಕಾಡೆಮಿ.
- *Monograph of PVTGs of Kerala Koraga.* (2020). Kerala Institute for Research Training and Development Studies of Scheduled Castes and Scheduled Tribes
- Ramachandra & Gangadhara Daivajna. (2020). A Socioeconomic and Educational conditions of Koragas (With reference of 100 selected families of Koragas in and around Kundapura in Udupi District). *International Journal of Creative Research Thoughts (IJCRT), 8*(9),2273-2285